# ಕರಡು ಮಸೂದೆಯಲ್ಲಿ ಏನಿದೆ?

- ಬಾಡಿಗೆ ತಾಯಿ ಮತ್ತು ಮಗುವನ್ನು ಬಯಸುವ ತಾಯಿ ಇಬ್ಬರ ಹಿತವನ್ನೂ ಕಾಯಬೇಕಾದರೆ ಮೊದಲೇ ಒಪ್ಪಂದ ಮಾಡಿಕೊಳ್ಳಬೇಕು.
- ಜನ್ಮ ದಾಖಲೆಯಲ್ಲಿ ಮಗುವಿನ ಜೆನೆಟಿಕ್ ತಾಯಿಯ ಹೆಸರೇ ಇರಬೇಕು.
- ಬಾಡಿಗೆ ತಾಯಿಗೆ ಹಣವನ್ನು ಕಂತಿನ ಮೇಲೆ ಕೊಡಬೇಕು. ಗರ್ಭಪಾತವಾದರೆ ಹಣವನ್ನು ವಾಪಸ್ಸು ನೀಡಬೇಕು. ಬಾಡಿಗೆ ತಾಯಿ ಹೆರಿಗೆಯಲ್ಲಿ ಮೃತಪಟ್ಟರೆ ವಿಮೆ ಮಾಡಿಸಬೇಕು.
- ಹೆರಿಗೆಯಾದ ನಂತರ 6 ವಾರಗಳ ಕಾಲ ಬಾಡಿಗೆ ತಾಯಿಯ ಯೋಗಕ್ಷೇಮವನ್ನು ಮಗು ಪಡೆಯುವವರು ನೋಡಬೇಕು.
- ಅಂಡಾಣು ಅಥವಾ ವೀರ್ಯಾಣುವನ್ನು ದಾನ ಪಡೆಯಬೇಕಾದರೆ ಪರವಾನಗಿ ಪಡೆದ ಅಂಡಾಣು– ವೀರ್ಯಾಣು ಬ್ಯಾಂಕ್‌ಗಳಿಂದಲೇ ಪಡೆಯಬೇಕು. ಅಂಡಾಣು ದಾನ ಮಾಡುವ ಮಹಿಳೆಯ ವಯಸ್ಸು 21–35 ಹಾಗೂ ವೀರ್ಯಾಣು ದಾನಿಯ ವಯಸ್ಸು 21–45 ಇರಬೇಕು. ಇದರಿಂದ 'ಪಾಕೆಟ್ ಮನಿ'ಗಾಗಿ ಅಂಡಾಣು, ವೀರ್ಯಾಣು ದಾನ ಮಾಡುವ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ನಿಯಂತ್ರಿಸಬಹುದು.

ಜಪಾನಿನ ಮಂಜಿ ಪ್ರಕರಣದ ಹಿನ್ನೆಲೆಯಲ್ಲಿ ಕರಡು ಮಸೂದೆಯಲ್ಲಿ ನಮೂದಿಸಲಾಗಿರುವ ಇನ್ನೊಂದು ಅಂಶವೆಂದರೆ ಬಾಡಿಗೆ ತಾಯಿಯಲ್ಲಿ ಭ್ರೂಣ ಬೆಳೆಯುತ್ತಿರುವಾಗ ಜೆನೆಟಿಕ್ ದಂಪತಿ ವಿಚ್ಛೇದನ ಪಡೆದರೂ ಆ ಮಗುವಿನ ಕಾನೂನು ರೀತ್ಯಾ ಪೋಷಕರು ಅವರೇ. ವಿದೇಶೀಯರು ಅಥವಾ ಅನಿವಾಸಿ ಭಾರತೀಯರು ಭಾರತದಲ್ಲಿ ಲೋಕಲ್ ಗಾರ್ಡಿಯನ್ ಅನ್ನು ನೇಮಿಸಬೇಕು. ಬಾಡಿಗೆ ತಾಯಿ ಮೂರು ಬಾರಿ ಮಾತ್ರ ಬಾಡಿಗೆ ಗರ್ಭ ಹೊರಬಹುದು.

ಮಸೂದೆಯ ರೂಪಿಸಿರುವ ನಾಲ್ವರು ಐಸಿಎಂಆರ್ ಸಮಿತಿಯ ನಾಲ್ವರು ಸದಸ್ಯರೆಂದರೆ ಡಾ.ಕಾಮಿನಿ ರಾವ್, ಡಾ.ಭಾರ್ಗವ, ಡಾ.ರಾಧೇ ಶರ್ಮಾ ಹಾಗೂ ಡಾ.ಜಯಂತ್ ಮೆಹ್ತಾ.